3. I strongly refute your statement that something has been suppressed and falsehood has been suggested. On the other hand I have tried my level best to see that the conduct of the Judges is neither commented upon, nor adversely, in the Legislature.

4 In your letter you have stated: "If I consent to your reading the entire correspondence that passed between us as also my letter reffered to above addressed to the Hon'ble Minister for Law, Justice and Company Affairs, will you assure me that you will read out all letters referred to above on the floor of both Houses of Legislature and also release them to the Press, so that the people may judge for themselves". Before I could send you a reply, I find that you have already gone to the press.

5. My Chief Secretary contacted you on the telephone, to-day, under my instructions, and obtained your consent to the reading of the entire correspondence between us Immediately thereafter, I have made a statement on the floor of the Legislative Assembly (a copy of which is enclosed), and I have also placed all the correspondence that passed between us, and also the letter written by you to the Hon'ble Minister for Law, Justice and Company Affairs, on the table of the House The Legislative Council was not in session, to-day, but a copy of my Statement together with copies of the correspondence will be placed on the table of the Legislative Council when it meets on Monday, the 25th April 1977.

With regards,

Yours Sincerely,
D. DEVARAJ URS

Hon'ble Mr. Chief Justice
G.K. GOVINDA BHAT.
High Court of Karnataka,
Attara Kacheri,
Bangalore.

KARNATAKA LAND REFORMS (AMENDMENT) BILL, 1977

Motion to Consider (Contd.)

† ಎನ್. ಹುಚ್ಚಮಾಸ್ತಿಗೌಡ —ಮಾನ್ಯ ಅಧ್ಯಕ್ಷಣೀಯವರೇ ಮಾನ್ಯ ಸದಸ್ಯರು ಕೊಟ್ಟಿರ ತಕ್ಕಂಥ ಕೆಲವು ಸಲಹೆಗಳು ಸೂಕ್ತವಾಗಿವೆ. ಆದರೆ ಹಣಕಾಸಿನ ದೃಷ್ಟಿಯಿಂದ ಯೋಚನೆ ಮಾಡಬೇಕಾದ್ದು ಬಹಳ ಅಗತ್ಯ. ಗೇಣಿದಾರರಿಗೆ ಹೆಚ್ಚು ಸಹಾಯ ಮಾಡಿ ಅವರನ್ನು ಮಾಲೀಕನ ನ್ನಾಗಿ ಮಾಡತಕ್ಕಂಥ ಉದ್ದೇಶ ನಾವು ಇಟ್ಟುಕೊಂಡಿರುವುದು ನಿಜ. ಆ ಉದ್ದೇಶಕ್ಕೆ ಅನುಗುಣ ವಾಗಿ ಸಹಾಯ ಮಾಡುವುದಕ್ಕೆ ಬದಲಾಗಿ ಹೆಚ್ಚು ಹೊರೆಯಾಗಿದೆ ಎನ್ನುವುದನ್ನು ನಾನು

ಒಪ್ಪುತ್ತೇನೆ. ಆದರೆ ಕಾರ್ಯವೇನೆಂದರೆ ಸರ್ಕಾರ ಆವರಿಗೆ ಕೊಡಬೇಕಾದಂಥ ಸಹಾಯವನ್ನು ಪೂರ್ಣವಾಗಿ ಕೊಡುವುದಕ್ಕೆ ಹಣದ ಒತ್ತಾಸೆ ಅವಶ್ಯಕ ಎನ್ನುವುದನ್ನು ಸದಸ್ಯರು ಮರೆಯುವ ಹಾಗಿಲ್ಲ. ಒಂದೇ ಗಂಟಿನಲ್ಲಿ ಕೊಡಬೇಕು ಎಂದು ಬಂದಾಗ, ಭೂಅಭಿವೃದ್ಧಿ ಬ್ಯಾಂಕ್‌ನವರು ಕೊಟ್ಟಿರತಕ್ಕಂಥ ಸಹಾಯದ ಹಣ 2 ಕೋಟಿ 45 ಲಕ್ಷ ರೂಪಾಯಿಗಳು, ಗೇಣಿದಾರರು 60 ಲಕ್ಷ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಆದುದರಿಂದ ಇನ್ನು ಹೆಚ್ಚಿಗೆ ಹಣವನ್ನು ಕೊಡ ತಕ್ಕಂಥವರು ಇದ್ದೇವೆಂಬುದನ್ನು ತಾವು ತಿಳಿದುಕೊಳ್ಳಬೇಕು.

SRI H. D. DEVEGOWDA.—Will you kindly tell us how much amount is required to fulfill the claims of physically handicapped and widows?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಜನ ವಿಧವೆಯರು ಮತ್ತು ಎಷ್ಟು ಜನ ಮೈನರ್ ಇದ್ದಾರೆ ಎಂದು ಲೆಕ್ಕ ಹಾಕಿ ಇಷ್ಟು ಭೂಮಿ ಗೇಣಿದಾರರ ಪರವಾಗಿ ಆಗುತ್ತದೆ ಎಂದು ಹೇಗೆ ತೀರ್ಮಾನ ಮಾಡುವುದಕ್ಕೆ ಸಾಧ್ಯ? ಆದುದರಿಂದ ಆ ಅಂಕಿ ಅಂಶಗಳನ್ನು ಈಗ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಜಮೀನು ಎಷ್ಟಿದೆ ಎನ್ನುವುದನ್ನು ಬೇಕಾದರೆ ಹೇಳಬಹುದು. ಆದರೆ ತೀರ್ಮಾನ ಯಾವ ರೀತಿ ಆಗುತ್ತದೆಯೋ ಅದನ್ನು ಈಗಲೇ ಹೇಳುವುದಕ್ಕೆ ಹೇಗೆ ಸಾಧ್ಯ?

ಶ್ರೀ ಕಾಗೋಡು ತಿಮ್ಮಪ್ಪ.—ಈಗ ನಮ್ಮ ರಾಜ್ಯಾದ್ಯಂತ ಇರತಕ್ಕಂಥವರ ಬಗ್ಗೆ ತಾವು ಅಂಕಿಅಂಶಗಳನ್ನು ಸಂಗ್ರಹ ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ಪ್ರೊ ರಾಟಾ ಡಿಕ್ಲರೇಷನ್ನ ಕೊಡಬೇಕು, ಡಿಕ್ಲರೇಷನ್ ಒಂದೊಂದು ಸಾರಿ ಬೇರೆಯವರ ಹೆಸರಿನಲ್ಲಿ ಖಾತೆ ಯಾಗಿ ಅವರಿಗೆ ಕೊಟ್ಟಿರುತ್ತಾರೆ. ಆದರೆ ಟ್ರಿಬ್ಯೂನಲ್‌ನಲ್ಲಿ ನಿತ್ಯರ್ಥವಾಗಿರುವಂಥ ಕೇಸುಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ಹೇಳಬಹುದಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ನಿಖರವಾದ ಅಂಕಿಸಂಖ್ಯೆಗಳನ್ನು ಕೊಡುವುದಕ್ಕೆ ಆಗುವುದಿಲ್ಲ, ಇನ್ನು ತೀರ್ಮಾನದ ಹಂತದಲ್ಲಿ ಇದೆ ಎಂದು ಹೇಳುತ್ತೀರಿ. ಈಗ ಏನು ಡಿಕ್ಲರೇಷನ್ ಕೊಟ್ಟಿದ್ದಾರೆ ಅದರ ಆಧಾರದ ಮೇಲೆ ಮಾಹಿತಿ ತರಿಸಿದರೆ ಆಗ ಹೇಳಬಹುದು. ಅಂತಿಮ ತೀರ್ಮಾನದಲ್ಲಿ, there may be some variation—say 5%, ತಾವು ಇದನ್ನು ಮಾಡುವಾಗ ಹಣ ಎಷ್ಟು ಬೇಕಾಗುತ್ತದೆ ಎನ್ನುತಕ್ಕದ್ದು ಚೆನ್ನಾಗಿ ಗೊತ್ತಿದ್ದರೆ ನಿಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಲಿಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಯೋಚನೆ ಮಾಡಬಹುದು. 60 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೇವೆಂದು ಹೇಳಿದರೆ ಅಲ್ಲಿ ಅವರು ಹೊಟ್ಟೆಗೆ ಇಲ್ಲದೆ ಸಾಯುತ್ತಿದ್ದಾರೆ. It is a very serious problem. They are in such a pathetic condition. ಅವರು ಊಟಕ್ಕೆ ಗತಿ ಇಲ್ಲದೇ ಸಾಯುತ್ತಿರುವುದರಿಂದ ಬೇಕಾದರೆ ನೀವು ಬೇರೆ ಯಾವ ಕೆಲಸವನ್ನಾದರೂ ನಿಲ್ಲಿಸಿ ಪರವಾಗಿಲ್ಲ, ಅವರ ಬಗ್ಗೆ ಸ್ವಲ್ಪ ಯೋಚನೆ ಮಾಡಿ.

ಶ್ರೀ ಎನ್ ಹುಚ್ಚ ಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಈ ವಿಷಯದಲ್ಲಿ ಎಷ್ಟು ಅನುಕಂಪ ಎನೆಯೋ ಸರ್ಕಾರಕ್ಕೂ ಅವರಿಗಿಂತ ಕಡಿಮೆ ಏನೂ ಇಲ್ಲವೆನ್ನುವುದನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಆದರೆ ಇದು ಹಾರಿಕೆ ಬರಬೇಕು. ನಮ್ಮನ್ನೆ ನಾವು ತತ್ವಗಳನ್ನು ಪ್ರಚಾರ ಮಾಡಿ.....

ಶ್ರೀ ಕೋಣಂದೂರು ಲಿಂಗಪ್ಪ.—ಅಂಗವಿಕಲರು ಮತ್ತು ವಿಧವೆಯರಿಗೆ ಸಂಬಂಧಪಟ್ಟ ಅರ್ಜಿಗಳನ್ನು ಮೊದಲು ಇತ್ಯರ್ಥ ಮಾಡಬೇಕು ಎಂದು ತಾವು ಆದೇಶ ಕೊಡಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಒಂದೇ ಗಂಟಿನಲ್ಲಿ ಕೊಡಬೇಕು ಎಂಬ ಕಾನೂನು ಇರಲಿಲ್ಲ. ಈಗ ತಿದ್ದುಪಡಿ ಮಾಡಿ ಕೊಡುತ್ತಿದ್ದೇವೆ. ಅಂಗವಿಕಲರಿಗೆ ಎಷ್ಟೇ ಆಗಲಿ ಒಂದೇ ಗಂಟಿನಲ್ಲಿ ಕೊಡಬೇಕು ಎಂದು ಮಾಡಿದ್ದೇವೆ ಈ ರೀತಿ ಈಗಾಗಲೇ ಕೆಡುತ್ತಿದ್ದೇವೆ. ಅವರಿಗೆ ಅಷ್ಟು ಕೊಟ್ಟರೂ ಕೂಡ ಇನ್ನೂ ಎಷ್ಟು ಹಣ ಕೊಡ ಬೇಕಾಗುತ್ತದೆ ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. ಎಲ್ಲ ಅಂಕಿ ಅಂಶಗಳನ್ನು ಸಂಗ್ರಹಿಸಿ ಎಲ್ಲಾ ತೀರ್ಮಾನವಾಗುವವರೆಗೆ ಇಷ್ಟೇ ಎಂದು ನಿರ್ದಿಷ್ಟವಾಗಿ ಹೇಳುವುದಕ್ಕೆ ಕ್ಯಾಗುವುದಿಲ್ಲ.

1-00 P. M.

ಶ್ರೀ ಕಾಗೋಡು ತಿಮ್ಮಪ್ಪ.—ಅಂಗವಿಕಲರು ಮತ್ತು ವಿಧವೆಯರು ಒಟ್ಟಿನಲ್ಲಿ ಎರಡು ಪರ್ಸೆಂಟಿಗಿಂತ ಜಾಸ್ತಿ ಇರುವುದಕ್ಕೆ ಸಾಧ್ಯವಿಲ್ಲ. Most of the Institutions are charitable Institutions covered under the Inams Abolition Act. ಹೆಚ್ಚಿಗೆ ಬರುವುದೇ ಇಲ್ಲ. ಸ್ಕಾಲರ್‌ಹೋಲ್ಡರ್ಸ್‌ಷಿಪ್ಪನ್ನೆ ಒಂದಿದೆ. ಆದರಲ್ಲಿ ಮೂರು ಕ್ಯಾಟಗರೀನ್ ಇದೆ. It is not at all a burden to the Government. It can be easily sorted out. ಸ್ಕಾಲ್ ಹೋಲ್ಡರ್ಸ್ ಪ್ರಶ್ನೆಯನ್ನು ನುಲಭವಾಗಿ ಇತ್ಯರ್ಥ ಮಾಡಿದರೆ ಆಷ್ಟೇನೂ ಕಷ್ಟವಾಗುವುದಿಲ್ಲ. ನೀವು ಒಂದು ತಾಲ್ಲೂಕಿನದನ್ನು ಇಟ್ಟುಕೊಂಡು ವರ್ಕೌಟ್ ಮಾಡಿ ನುಮ್ಮನೆ ವಿಧಾನಸೌಧದಲ್ಲಿ ಕುಳಿತುಕೊಂಡು ಕಥೆ ಹೇಳುತ್ತಾ ಕುಳಿತುಕೊಂಡರೆ ಹೇಗೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಕಥೆ ಹೇಳುತ್ತಿದ್ದೇನೆ ಎಂದು ಹೇಳುವುದಾದರೆ ನಿಮ್ಮ ಹೇಳಿಕೆಯೂ ಕಥೆ ಎಂದು ಹೇಳಬೇಕಾಗುತ್ತದೆ. ನೀವೂ ಅಂಕಿಅಂಶಗಳನ್ನು ನಂಗ್ರಹಿಸಿ ಇಷ್ಟೇ ನರಿ ಎಂದು ಹೇಳಿಲ್ಲ. 31-1-1977ರ ವರೆಗೆ 36,65,892 ರೂಪಾಯಿ ಪರಿಹಾರವನ್ನು ವಿಧವೆಯರಿಗೆ ಕೊಟ್ಟಿದ್ದೇವೆ. ಮೈನರ್ಸ್‌ಗೆ 6,76,832 ರೂಪಾಯಿ ಪರಿಹಾರ ಕೊಟ್ಟಿದ್ದೇವೆ. ಮುದುಪೆಯಾಗದ ಹೆಣ್ಣುಮಕ್ಕಳಿಗೆ 76,351 ರೂಪಾಯಿ ಕೊಟ್ಟಿದ್ದೇವೆ. ಅಂಗವಿಕಲರಿಗೆ 2,58,597 ರೂಪಾಯಿ ಪರಿಹಾರ ಕೊಟ್ಟಿದ್ದೇವೆ. ಅಂತಹವರ ಸಂಖ್ಯೆ ಎಷ್ಟಿದೆ ಎಂಬುದನ್ನು ನೋಡಿ ಆ ವರ್ಗದ ಜನರಿಗೆ ಪರಿಹಾರ ಕೊಡಬೇಕು ಎಂದು ತಿದ್ದುಪಡಿ ಮಾಡಿದ್ದೇವೆ ಆದರಂತೆ ಕೊಡುತ್ತಿದ್ದೇವೆ. ಅವರಿಗೆಲ್ಲಾ ಪೂರ್ತಿ ಕೊಡುವುದಕ್ಕೆ ಎಷ್ಟು ಬೇಕು ಎಂಬುದಕ್ಕೆ ಅಂಕಿಅಂಶ ಗಳನ್ನು ನಂಗ್ರಹಿಸಿ ಅಂದಾಜಾಗಿ ಎಷ್ಟು ಕೊಡಬಹುದೆಂಬುದನ್ನು ನೋಡಿ ಯಾವರೀತಿ ಕೊಡುವುದಕ್ಕೆ ಸಾಧ್ಯ ಎಂಬುದನ್ನು ಸರ್ಕಾರ ಆಲೋಚನೆ ಮಾಡುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ.—ಏನಾದರೂ 5 ಕೋಟಿಗಿಂತ ಜಾಸ್ತಿ ಆಗುವುದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಜೊತೆಗೆ ಹೆಚ್ಚು ಹಣವನ್ನು ಬ್ಯಾಂಕ್‌ಗಳ ಮುಂಖಾಂತರಕೊಡುತ್ತೇವೆ. ಬಡ್ಡಿ ಜಾಸ್ತಿಯಾಗುತ್ತದೆ ಎಂಬುದು ನಿಜ. ಆದನ್ನು ಯಾವರೀತಿ ಕಡಿಮೆ ಮಾಡಬೇಕು? ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ಶೇಕಡ 11 ರೂಪಾಯಿ ಬಡ್ಡಿ ಇದ್ದರೆ ಬೇರೆ ಬ್ಯಾಂಕುಗಳಲ್ಲಿ 18 ರೂಪಾಯಿ ಬಡ್ಡಿ ಕೊಡಬೇಕಾಗುತ್ತದೆ.

ಶ್ರೀ ಎಚ್.ಡಿ. ದೇವೇಗೌಡ.—ಈಗ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಹೇಳಿದಂತೆ ಈ ವರ್ಗದ ಜನರಿಗೆ ಆಧ್ಯತ ಕೊಡುವಂತೆ ಆದೇಶ ಕೊಡುವ ಬಗ್ಗೆ ಯೋಚನೆ ಮಾಡಿ. ಎರಡನೆ ಯದು ಸರ್ಕಾರಿ ನೌಕರರಿಗೆ ಮನೆ ಕಟ್ಟಿನುವುದಕ್ಕೆ ಸಾಲ ಕೊಡುತ್ತೀರಿ. ಅವರಿಗೆ 6 ಪರ್ಸೆಂಟ್ ಬಡ್ಡಿ ಹಾಕುತ್ತೀರಿ. ಈ ವರ್ಗದ ಜನರಿಗೆ 11 ಪರ್ಸೆಂಟ್ ಕೊಡು ಎಂದು ಯಾತಕ್ಕೆ ಹೇಳುತ್ತೀರಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ಸರ್ಕಾರಿ ನೌಕರರಿಗೆ ನಂಬಳನಾರಿಗೆ ಕೊಡುವ ವಿಚಾರ ಬಂದಾಗ ನಮಗಿಂತ ಹೆಚ್ಚು ಉತ್ಪಾಹದಿಂದ ಮಾತನಾಡಿದ್ದೀರಿ. ರಾಜ್ಯಸರ್ಕಾರಿ ನೌಕರಿಗೆ ಕೇಂದ್ರ ಸರ್ಕಾರದಷ್ಟು ಸ್ಕೇಲ್ ಕೊಡಬೇಕು ಎಂದು ವಾದ ಮಾಡುವವರೂ ಇವರೆ. ಕೊಟ್ಟಮೇಲೆ ಅವರಿಗೆ ಕೊಡುವುದಕ್ಕೆ ಹಣ ಇದೆ, ಇವರಿಗೆ ಏತಕ್ಕೆ ಕೊಡುವುದಿಲ್ಲ ಎಂದು ಕೇಳುವವರೂ ಇವರೆ.

ಶ್ರೀ ಎಚ್. ಡಿ. ದೇವೇಗೌಡ.—ನಾವು ಆ ರೀತಿ ಹೇಳುತ್ತಿಲ್ಲ..... You have completely ignored this house.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನೀವು ಹೇಳಿದ್ದು ದಾಖಲೆ ಇದೆ. ಮರೆತು ಮಾತ ನಾಡಬೇಡಿ.

ಶ್ರೀ ಎಚ್ ಡಿ. ದೇವೇಗೌಡ.—ನೀವು ಕೊಟ್ಟಿದ್ದಕ್ಕೆ ನಮ್ಮ ತಕರಾರು ಏನೂ ಇಲ್ಲ. ನಾವು ತಕರಾರು ಮಾಡುವುದಕ್ಕೆ ಬಂದಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪೈ ಅವರ ವರದಿ ಬಂದಮೇಲೆ ಅದನ್ನು ಕೊಟ್ಟು ಆಮೇಲೆ ಸಭೆಗೆ ತಂದಿರಬಹುದು. ಹಿಂದೆ ಕೊಟ್ಟಾಗಲೆಲ್ಲಾ ಎದುರುಪಕ್ಷದ ಸದಸ್ಯರು ಆಡಳಿತ ಪಕ್ಷದ ಸದಸ್ಯರಿಗಿಂತ ಹೆಚ್ಚು ಉತ್ಸಾಹದಿಂದ ಸರ್ಕಾರಿ ನೌಕರರಿಗೆ ಕೊಡಿಸುವುದಕ್ಕೆ ಪ್ರಯತ್ನ ಮಾಡಿದರು ಎಂದು ಪುಸ್ತಕದಲ್ಲಿ ಬರೆದಿರುವುದು ದಾಖಲೆ ಇದೆ.

ಶ್ರೀ ವಿ.ಎನ್. ಪಾಟೀಲ್.—ಸರ್ಕಾರಿ ನೌಕರರಿಗೆ ಕೊಟ್ಟಂತೆ ಅದೇ ರೀತಿ ಇವರಿಗೂ ಕನ್ ಸೇಷನ್ ಕೊಡಿ ಎಂದು ಹೇಳುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆದೇರೀತಿ ಕೊಡುವುದಕ್ಕೆ ಸರ್ಕಾರದ ಹತ್ತಿರ ಹಣ ಬೇಕಲ್ಲ; ಮುಹತ್ತಾಗಿ ಕೊಡಿ, ಐದು ಎಕರೆಗಿಂತ ಕಡಿಮೆ ಇರುವವರಿಗೆ ಹಣ ತೆಗೆದುಕೊಳ್ಳಬೇಡಿ, ಹಾಗೆಯೇ ಕೊಡಿ ಎಂಬುದಾಗಿ ಹೀಗೆ ಇನ್ನೂ ಅನೇಕ ನಲಹೆಗಳಿವೆ. ಇದನ್ನು ಲೆಕ್ಕಕ್ಕೆ ತೆಗೆದು ಕೊಂಡು ಸಾಧನೆ ಮಾಡಿದರೆ 600 ಕೋಟಿ ರೂಪಾಯಿ ಹಣ ಆದರೂ ಸಾಕಾಗುವುದಿಲ್ಲ. ಇನ್ನೂ 600 ಕೋಟಿ ರೂಪಾಯಿ ಹಣ ಬೇಕಾಗುತ್ತದೆ. ಅದೆಲ್ಲಾ ಎಲ್ಲಿಂದ ಬರಬೇಕು? ಯಾವರೀತಿ ಮಾಡಬೇಕು? ಭೂಸುಧಾರಣೆ ಜಾರಿಗೆ ತರಬೇಕಾದರೆ ಯಾವರೀತಿ ಹಣ ಒದಗಿಸಬೇಕು ಎಂದು ಆಲೋಚನೆ ಮಾಡಿದಾಗ ಕೇಂದ್ರಸರ್ಕಾರದಿಂದ ಹಣ ಸಿಗಬಹುದು ಎಂಬ ನಿರೀಕ್ಷೆ ನಮಗಿತ್ತು. ಆದರೆ ಕೇಂದ್ರದಿಂದ ಹಣ ಸಹಾಯ ಸಿಗಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಯಾತಕ್ಕೆ ಸಿಗಲಿಲ್ಲ? 20 ಅಂಶದ ಕಾರ್ಯಕ್ರಮದಲ್ಲಿ ಭೂ ಸುಧಾರಣೆ ಮಹತ್ವಪೂರ್ಣವಾದ ಕಾರ್ಯಕ್ರಮ ಎಂದು ಡಂಗೂರ ಹೊಡೆದಿದ್ದೀರಿ. ಆದರೆ ಕಾನೂನು ಜಾರಿಗೆ ತರಬೇಕಾದರೆ ಕೇಂದ್ರಸರ್ಕಾರದಿಂದ ಹಣ ಬರಲಿಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದು ಚುನಾವಣಾ ಪ್ರಚಾರ ಭಾಷಣ ಅಲ್ಲ. ಇಲ್ಲಿ ಈಗ ನಡೆಯುತ್ತಿರುವುದು ಹಣಕಾಸಿನ ಪರಿಸ್ಥಿತಿ ವಿಷಯ.

ಶ್ರೀ ಎಚ್. ಡಿ. ದೇವೇಗೌಡ.—ಕೇಂದ್ರಸರ್ಕಾರದಿಂದ ಸಹಾಯ ಧನ ಯಾತಕ್ಕೆ ಬರಲಿಲ್ಲ ಎಂಬುದಕ್ಕೆ ಕಾರಣ ಹೇಳಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—20 ಅಂಶದ ಕಾರ್ಯಕ್ರಮದಲ್ಲಿ ಭೂಸುಧಾರಣೆ ಪ್ರಾಮುಖ್ಯವಾದ ಕಾರ್ಯಕ್ರಮ ಇದನ್ನು ಜಾರಿಗೆ ಕೊಡುವಾಗ ಇದು ಸೆರ್ಪ್ ನಪೋರ್ಟಿಂಗ್ ಸ್ಕೀಂ ಆಗಿರಬೇಕು ಎಂದು ಸ್ಪಷ್ಟವಾಗಿ ನಧೆಯಲ್ಲಿ ಹೇಳಿದ್ದೇನೆ. ಶಕ್ತಿ ಮೀರಿ ಭೂಸುಧಾರಣೆ ಜಾರಿಗೆ ತರುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಸಿಬ್ಬಂದಿ ಸಾಕಷ್ಟು ಇಲ್ಲದೇ ಇರುವುದರಿಂದ ಸ್ವಲ್ಪ ತಡವಾಯಿತು. ಅದನ್ನು ನೋಡಿ ಈಚೆಗೆ ಹೆಚ್ಚು ಸಿಬ್ಬಂದಿ ಕೊಡುತ್ತಿದ್ದೇವೆ. ಪ್ರತಿ ಜಿಲ್ಲೆಯಲ್ಲಿ ಟ್ರಿಬ್ಯುನಲ್‌ಗಳ ಮುಂದೆ ಇರತಕ್ಕ ವಾಜ್ಯಗಳ ಸಂಖ್ಯೆ ನೋಡಿ ಅದಕ್ಕೆ ತಕ್ಕಂತೆ ಸಿಬ್ಬಂದಿ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ: ಹಣಕಾಸನ್ನು ಒದಗಿಸಬೇಕಾದ್ದು ಸರ್ಕಾರದ ಜವಾಬ್ದಾರಿ ಇದು ಸೆರ್ಪ್ ನಪೋರ್ಟಿಂಗ್ ಸ್ಕೀಂ ಆಗಿರುವುದರಿಂದ.....

ಶ್ರೀ ಕಾಗೋಡು ತಿಮ್ಮಪ್ಪ.—ರ್ಯಾಂಡ್ ರಿಫಾರ್ಮ್ಸ್ ಆಕ್ಟ್ 1974ರಲ್ಲಿ ಎಫ್‌ಕ್ಟ್‌ಗೆ ಕೊಟ್ಟಿರಿ. ಅದಕ್ಕೆ ಕೇಂದ್ರಸರ್ಕಾರದವರು ಏನು ಅಭಿಪ್ರಾಯ ಕೊಟ್ಟಿದ್ದಾರೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮ್ಮ ಮುಖ್ಯಮಂತ್ರಿಗಳು ಮತ್ತು ನಾನೂ ಕೂಡ ಕೇಂದ್ರದ ಮಂತ್ರಿಗಳ ಜೊತೆ ವ್ಯವಹಾರ ಮಾಡಿ ಹಣ ಪಡೆಯುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಇದನ್ನು ಜಾರಿಗೆ ಕೊಡಬೇಕಾದರೆ ಕಡೇಪಕ್ಷ 10 ಕೋಟಿ ರೂಪಾಯಿ ಸಹಾಯ ಬೇಕಾಗಿತ್ತು. ಆದು ಆಗಲಿಲ್ಲ. ಹರಿಜನಗಿರಿಜನರಿಗೆ, ಬಡವರಿಗೆ ಭೂಮಿ ಹಂಚುತ್ತೇವೆ, ಅದರ ಅಭಿವೃದ್ಧಿಗೋಸ್ಕರ ಹಣ ಸಹಾಯ ಮಾಡಬೇಕು ಎಂದು ಕೇಳಿದ್ದೆವು. ಅದಕ್ಕೆ ಕೇಂದ್ರದವರು ಕೊಡುತ್ತೇವೆ ಎಂದು ಹೇಳಿದರು ಒಬ್ಬೊಬ್ಬರಿಗೆ 250 ರೂಪಾಯಿ ಕೊಡುತ್ತೇವೆ ಎಂದು ಹೇಳಿದರು. ಅದೂ ಕೂಡ ಸಿಕ್ಕಲ್ಲ. ಈಗ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ಇಲ್ಲ. ಅವರ ಅಭಿಪ್ರಾಯ ಏನಿದೆ ಎಂಬುದನ್ನೂ ತಿಳಿದುಕೊಳ್ಳೋಣ ಈಗ ಕೇಂದ್ರದಲ್ಲಿರುವವರು ಅವರೆಲ್ಲಾ ನಮಗಿಂತ ತೀವ್ರವಾಗಿ ಆಲೋಚನೆ ಮಾಡತಕ್ಕ ಅದರಲ್ಲೂ ಸಮಾಜವಾದದ ಸಿದ್ಧಾಂತದಲ್ಲೆ ನಮಗಿಂತ ಹೆಚ್ಚು ವಿಶ್ವಾಸವುಳ್ಳವರು. ಅವರನ್ನೂ ನೋಡಿ ಭೂಸುಧಾರಣೆ ಜಾರಿಗೆ ಕೊಡುವುದಕ್ಕೆ ಸಹಾಯ ಬೇಕು ಎಂದು ಕೇಳೋಣ. ತಮ್ಮ ಪಕ್ಷ ಅಲ್ಲಿರುವುದರಿಂದ ತಮ್ಮ ಸಹಾಯ ಕೂಡ ಕೇಳುತ್ತಿದ್ದೇವೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ರೀತಿ ಸಹಾಯ ಕೊಡಿಸುವುದಾದರೆ ಜಾರಿಗೆ ಕೊಡು ತ್ತೇವೆ. ಆಗ ಸರ್ಕಾರಕ್ಕೆ ಏಷ್ಟೂರ ಮಟ್ಟಿನ ಕೀರ್ತಿ ಬರುತ್ತದೆಯೋ ಅಷ್ಟೇ ಕೀರ್ತಿ ನಿಮ್ಮ ಪಕ್ಷದವರಿಗೂ ಬರುತ್ತದೆ.

ಶ್ರೀ ಕೊಣಂದೂರು ಲಿಂಗಪ್ಪ —ನಿಮ್ಮ ಮೂಲಕ ಏನು ಕೀರ್ತಿ ಬರುತ್ತದೆ ?

ಶ್ರೀ ಹೆಚ್. ಡಿ. ದೇವೇಗೌಡ.—1974ರಲ್ಲಿ ಲ್ಯಾಂಡ್ ರಿಫಾರಮ್ಸ್ ಕಾಯಿದೆಯನ್ನು ಸಮಗ್ರವಾಗಿ ಮಾಡಿದಾಗ ಸೆರ್ಪ್ ನಪೋರ್ಟಿಂಗ್ ಆಧಾರದ ಮೇಲೆ ಈ ಒಂದು ಕಾಯಿದೆ ಕಾರ್ಯಗತ ವಾಗಬೇಕಾಗುತ್ತದೆಂದು ಹೇಳಿದೆ. ಆದರೆ ತುರ್ತು ಪರಿಸ್ಥಿತಿ ಬಂದಮೇಲೆ ಭೂ ಸುಧಾರಣಾ ಕಾಯಿದೆಯನ್ನು ಬಹಳ ತ್ವರಿತ ಗತಿಯಲ್ಲಿ ಅನುಷ್ಠಾನಕ್ಕೆ ತರಬೇಕೆಂಬ ವಿಚಾರವನ್ನು ದೇಶದ ಜನತೆಯ ಮುಂದೆ ಇಟ್ಟರು. ಆದನ್ನು ತ್ವರಿತವಾಗಿ ಜಾರಿಗೆ ತರಲು ಹಣ ಒದಗಿಸುವುದಕ್ಕೆ ಪ್ರಧಾನ ಮಂತ್ರಿಗಳು ಸಹ ಹಿಂದೆ ಬಿದ್ದ ಹಾಗೆ ಕಾಣಲಿಲ್ಲ, ಈ ಕಾರ್ಯಕ್ರಮವನ್ನು ಜಾರಿಗೆ ತರಲು ಎಷ್ಟು ಹಣ ಬೇಕಾದರೂ ಕೊಡುವುದಾಗಿ ತಿಳಿಸಿದ್ದರು. ಈ ಬಗ್ಗೆ ಒಬ್ಬೊಬ್ಬ ಮಂತ್ರಿಗಳು ಒಂದೊಂದು ರೀತಿ ರವ್ಯೂ ಮಾಡಿದ್ದಾರೆ. ನೀವು, ಈಗಿನ ಸರ್ಕಾರ ಹಣ ಕೊಡುವುದೇ ಬಿಡುವುದೇ ಎಂದು ಯೋಚನೆ ಮಾಡುತ್ತಿದ್ದೀರಾ ? ಈಗಿನ ಸರ್ಕಾರದಲ್ಲಿ ಶ್ರೀಮಂತ ವರ್ಗದವರು ಹೆಚ್ಚಾಗಿದ್ದಾರೆ ಎಂದು ಭಾಷಣ ಮಾಡಿದಿರಿ. ಈಗ ಆ ವಿಚಾರ ಬೇಡ. ಹಿಂದಿನ ಸರ್ಕಾರ ಯಾವ ಕಾರಣದಿಂದ ಹಣ ಕೊಡುವುದಿಲ್ಲವೆಂದು ಹೇಳಿತ್ತು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಾಲಿ ಇರುವ ಸರ್ಕಾರದ ಸಹಾಯವನ್ನು ಕೇಳಿದರೆ ಮುಂದೆ ಆಲೋಚನೆ ಮಾಡುತ್ತೇವೆಂದು ಹೇಳುತ್ತಾರೆ. ಹಿಂದಿನ ಸರ್ಕಾರ ಇದ್ದಾಗ ಕೇಂದ್ರದ ವ್ಯವಸಾಯ ಮಂತ್ರಿಗಳನ್ನು ಮತ್ತು ಸಂಬಂಧಪಟ್ಟ ಮಂತ್ರಿಗಳನ್ನು ನಾನು ಮತ್ತು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಸಹ ಕಂಡು ಈ ಕಾರ್ಯಕ್ಕೆ ಹಣ ಸಹಾಯ ಬೇಕೆಂದು ಕೇಳಿಕೊಂಡಿದ್ದೇವೆ, ಇದು ಸೆರ್ಪ್ ನಪೋರ್ಟಿಂಗ್ ಸ್ಕೀಂ ಆಗಬೇಕು ಮತ್ತು ಇದು ರಾಜ್ಯ ಸರ್ಕಾರದ ಖರ್ಚಿನಿಂದಾಗಲೀ ಅಥವಾ ಕೇಂದ್ರ ಸರ್ಕಾರದ ಜವಾಬ್ದಾರಿಯಿಂದಾಗಲೀ ಮಾಡತಕ್ಕ ಯೋಜನೆ ಅಲ್ಲ ಎಂಬುದನ್ನು ನಾನು ಈ ಮಸೂದೆಯನ್ನು ಸಭೆಯ ಮುಂದಿಟ್ಟಾಗ ಸ್ಪಷ್ಟವಾಗಿ ಹೇಳಿದ್ದೇನೆ. ಆದ್ದರಿಂದ ಈ 20 ಅಂಶಗಳ ಕಾರ್ಯಕ್ರಮ ಜಾರಿಗೆ ಬಂದಾಗ ಆ ಕೆಲಸವನ್ನು ಜಾಗ್ರತೆಪೂರ್ಣಗೊಳಿಸ ಬೇಕೆಂದು ಹೇಳಿದ್ದಾರೆಯೇ ವಿನಹ ಹಣ ಕೊಡುತ್ತೇವೆಂದು ಹೇಳಿಲ್ಲ ಆದರಲ್ಲಿಯು ಸಹ ಹೆಚ್ಚುವರಿ ಇರತಕ್ಕ ಭೂಮಿಯನ್ನು ಬೇಗ ಪಡೆದು ಭೂಮಿ ಇಲ್ಲದವರಿಗೆ ಹಂಚಬೇಕೆಂಬ ಬಗ್ಗೆ ಪ್ರೊತ್ಸಾಹ ನೀಡಿದ್ದರು. ಆ ಬಗ್ಗೆ ನಾವು ನಮ್ಮ ಪ್ರಯತ್ನವನ್ನು ಮಾಡಿದ್ದೇವೆ.

ಶ್ರೀ ಹೆಚ್. ಡಿ ದೇವೇಗೌಡ.—1970ರಲ್ಲಿ ಆಗಿನ ಸರ್ಕಾರದವರು ಸಣ್ಣ ಹಿಡುವಳಿದಾರರಿಗೆ 32 ಕೋಟಿ ರೂಪಾಯಿ ಹಣವನ್ನು ಒದಗಿಸತಕ್ಕ ಯೋಜನೆಯನ್ನು ಮಾಡಿ, ಅದನ್ನು ರಿಸರ್ವ್ ಬ್ಯಾಂಕ್ ಮತ್ತಿತರ ಎಲ್ಲ ಬ್ಯಾಂಕುಗಳ ಮುಖಾಂತರ ಸಣ್ಣ ಹಿಡುವಳಿದಾರರಿಗೆ ಪೇಮೆಂಟ್ ಮಾಡಬೇಕೆಂಬ ಬಗ್ಗೆ ನಿರ್ಣಯವನ್ನು ಕಳುಹಿಸಿದ್ದಕ್ಕೆ ಮಾಜಿ ಪ್ರಧಾನ ಮಂತ್ರಿಗಳು ಅದನ್ನು ನಾನ್ ಪ್ಲಾನ್ ಎಕ್ಸ್‌ಪೆಂಡಿಚರಿನಲ್ಲಿ ಪೀಟ್ ಮಾಡಬೇಕೇ ವಿನಹ ಪ್ಲಾನ್ ಎಕ್ಸ್‌ಪೆಂಡಿಚರಿನಲ್ಲಿ ಪೀಟ್ ಮಾಡುವುದಕ್ಕೆ ಬರುವುದಿಲ್ಲವೆಂದು ತಿಳಿಸಿದ್ದರು. ನಾವು ಪ್ರಗತಿಯ ಆಧಾರದ ಮೇಲೆ ಅದನ್ನು ಮಾಡುತ್ತೇವೆಂದು, ಹೋದಂತಹ ಸರ್ಕಾರಕ್ಕೆ ಹೇಳಿ ನಿರಾಕರಣೆ ಮಾಡಿದಿರೋ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ದೇವೇಗೌಡರಿಗೆ ಇದು ಒಂದು ರೀತಿಯ ಹಾಸ್ಯಾಸ್ಪದವಾಗಿ ಕಾಣಬಹುದು. ಪ್ರತ್ಯೇಕವಾಗಿ ಒಂದೊಂದು ರಾಜ್ಯದ ಜಿಲ್ಲೆಗಳನ್ನು ತೆಗೆದುಕೊಂಡು ಸಹಾಯ ಮಾಡತಕ್ಕ ಯೋಜನೆಯೇ ಬೇರೆ, ಅದು ಸಣ್ಣ ಹಿಡುವಳಿದಾರರಿಗೆ ಸಂಬಂಧಪಟ್ಟ ಯೋಜನೆ ಅಲ್ಲ ಈಗಿರತಕ್ಕ ಸಮಸ್ಯೆ ಗೇಣಿದಾರರಿಗೆ ಸಂಬಂಧಪಟ್ಟದ್ದು ಇದಕ್ಕೆ ಪ್ರತ್ಯೇಕ ಯೋಜನೆ ಇದೆಯೆಂತು ಇದಕ್ಕೆ ಪ್ರತ್ಯೇಕವಾದ ಯೋಜನೆಯನ್ನು ತಯಾರಿಸಿಯೇ ಕೆಲಸ ಮಾಡ ಬೇಕು. ಇದು ಸೆರ್ಪ್ ನಪೋರ್ಟಿಂಗ್ ಯೋಜನೆಯಾಗಿರಬೇಕೆಂಬ ನಿಯಮವಿರುವುದರಿಂದ ಅವರು ಏನು ಹೇಳಿದರೂ ಪ್ರಯೋಜನವಿಲ್ಲ. ಅನೇಕ ಬ್ಯಾಂಕರುಗಳು ಈ ಯೋಜನೆಗೆ ತಮ್ಮ ಕೈಯಿಂದ ಲಕ್ಷಾಂತರ ಕೋಟ್ಯಾಂತರ ರೂಪಾಯಿಗಳನ್ನು ಕೊಡಲು ಸಿದ್ಧರಾಗಿದ್ದಾರೆ, ಮತ್ತು ನಮ್ಮಲ್ಲಿ 60 ಲಕ್ಷ ರೂಪಾಯಿಗಳನ್ನು ಈಗಾಗಲೇ ಕೊಟ್ಟಿದ್ದಾರೆ. ಅದು ಸಾಲದೆ ಇದ್ದ ಪಕ್ಷದಲ್ಲಿ ಭೂ

ಅಭಿವೃದ್ಧಿ ಬ್ಯಾಂಕುಗಳಿಂದ ಕೊಡತಕ್ಕ ವ್ಯವಸ್ಥೆಯಾಗಿದೆ. ಇದರಲ್ಲಿರತಕ್ಕ ಇನ್ನೊಂದು ಮುಖ್ಯವಾದ ಅಂಶವೇನೆಂದರೆ, ಭೂ ಮಾಲೀಕರಿಗೆ ಕೊಡಬೇಕಾದ ಹಣದ ವಿಷಯವಾಗಿ ನಮ್ಮ ಸ್ನೇಹಿತರು ಈಗಾಗಲೇ ಹೇಳಿದ್ದಾರೆ. ಈ ಕಾನೂನಿನಲ್ಲಿ ಧಾರ್ಮಿಕ ಸಂಸ್ಥೆಗಳಿಗೆ ಕಾಲಕಾಲಕ್ಕೆ ಹಣವನ್ನು ಕೊಡಬೇಕೆಂಬ ನಿಯಮವನ್ನು ಮಾಡಿರುವುದರಿಂದ ಅವಕ್ಕೆ ಒಂದು ಪ್ರತ್ಯೇಕವಾದ ಫಂಡ್‌ನ್ನು ಮಾಡಿ ಕೊಡತಕ್ಕ ವ್ಯವಸ್ಥೆ ಇರಲಿಲ್ಲ. ಈಗ ಅವುಗಳಿಗೆ ಹಣವನ್ನೊದಗಿಸಲು ಒಂದು ಫಂಡನ್ನು ಮಾಡಬೇಕೆಂಬ ವಿಚಾರ ಈ ತಿದ್ದುಪಡಿ ಮಸೂದೆಯಲ್ಲಿದೆ. ಮತ್ತು ಅದನ್ನು ಮಾಡುವುದಕ್ಕೂ ಸಹ ನಾವು ಈಗ ಪ್ರಯತ್ನ ಮಾಡುತ್ತಿದ್ದೇವೆ.

ಇನ್ನು ನಮ್ಮ ಸ್ನೇಹಿತರೊಬ್ಬರು ಮಾತನಾಡುತ್ತಾ ಗೇಣಿ ವಸೂಲಿಗೆ ನೋಟೀಸ್ ಕೊಟ್ಟಿದ್ದಾರೆಂದು ಹೇಳಿದರು. ಗೇಣಿ ವಸೂಲಿ ಮಾಡಬೇಕೆಂಬ ಅಂಶ ಇದರಲ್ಲಿ ಇಲ್ಲ. ನಮ್ಮ ಕೆಲವು ಅಧಿಕಾರಿಗಳು ತಪ್ಪು ಕಲ್ಪನೆಯಿಂದ ನೋಟೀಸ್ ಕೊಟ್ಟಿದ್ದಾರೆ, ನಿಜ, ಆದರೆ ನಾವು ಹಲವಾರು ತಿಂಗಳುಗಳ ಹಿಂದೆಯೇ ಒಂದು ಸರ್ಕ್ಯುಲರನ್ನು ಹೊರಡಿಸಿ ಯಾರಿಂದಲೂ ಗೇಣಿ ವಸೂಲ್ಮಾಡ ಕೂಡದೆಂದೂ ಮತ್ತು ಒಂದು ವೇಳೆ ವಸೂಲ್ಮಾಡಿದ್ದರೆ ಆ ಹಣವನ್ನು ಅವರು ಸರ್ಕಾರಕ್ಕೆ ಕೊಡಬೇಕಾದ ಬಾಬಿಗೆ ಜಮಾ ಮಾಡಿಕೊಳ್ಳಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದ್ದೇವೆ. ಇತ್ತೀಚಿಗೆ ನೋಟೀಸ್ ಕೊಟ್ಟಿರುವುದು ನನ್ನ ಗಮನಕ್ಕೆ ಬಂದಿಲ್ಲ; ಒಂದು ವೇಳೆ ಏನಾದರೂ ನೋಟೀಸ್ ಕೊಟ್ಟಿದ್ದರೆ ಮತ್ತೊಮ್ಮೆ ಸಂಬಂಧಪಟ್ಟ ಎಲ್ಲ ಜಿಲ್ಲಾಧಿಕಾರಿಗಳಿಗೂ ತಿಳಿಸುತ್ತೇವೆ. ಒಟ್ಟಿನಲ್ಲಿ ಗೇಣಿಯನ್ನು ವಸೂಲ್ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಸ್ಥಳೀಯ ಟ್ರಿಬ್ಯುನಲ್‌ಗಳಲ್ಲಿ ಅನ್ಯಾಯವಾದುದಕ್ಕೆ ಏನು ಪರಿಹಾರ ನೀಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—42ನೇ ತಿದ್ದುಪಡಿ ಮಸೂದೆ ಬಂದಮೇಲೆ ರಾಜ್ಯಪಟ್ಟದಲ್ಲಾಗಲೀ, ಡಿವಿಜನ್ ಮಟ್ಟದಲ್ಲಾಗಲೀ ಅಥವಾ ಜಿಲ್ಲಾ ಮಟ್ಟದಲ್ಲಾಗಲೀ ಟ್ರಿಬ್ಯುನಲ್‌ಗಳನ್ನು ಮಾಡಬೇಕೆಂಬ ಯೋಚನೆ ಸರ್ಕಾರಕ್ಕೆ ಇದೆ. ಆದ್ದರಿಂದ ನಾವು ಅದನ್ನು ಕೂಡಲೇ ಮಾಡತಕ್ಕ ಕಾರ್ಯಕ್ರಮವನ್ನು ಆಲೋಚಿಸುತ್ತಿದ್ದೇವೆ. ಅದನ್ನು ಮಾಡಿ ಅದಕ್ಕೆ ಏನಾದರು ಪರಿಹಾರ ಕಂಡು ಹಿಡಿಯಬೇಕೆಂಬುದು ಸರ್ಕಾರದ ಆಲೋಚನೆಯಲ್ಲಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಈಗ ಆಗಿರತಕ್ಕ ಅನ್ಯಾಯಕ್ಕೆ ನಾಳೆಯಾದರು ಪರಿಹಾರ ದೊರಕಿಸಿಕೊಡುತ್ತೀವೆಂಬ ಭರವಸೆ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅನ್ಯಾಯವಾಗಿದೆ ಎಂದು ಸರ್ಕಾರಕ್ಕೆ ಕಂಡುಬಂದ ಪಕ್ಷದಲ್ಲಿ ಸರ್ಕಾರವೇ ನೇರವಾಗಿ ಅಂಥ ಕೆಲವು ವಾಜ್ಯಗಳನ್ನು ಕೋರ್ಟಿಗೆ ತೆಗೆದುಕೊಂಡು ಹೋಗಿರತಕ್ಕ ನಿದರ್ಶನಗಳು ಇವೆ,

ಶ್ರೀ ಹೆಚ್. ಡಿ. ದೇವೇಗೌಡ.—ಸ್ಥಳೀಯ ಟ್ರಿಬ್ಯುನಲ್‌ಗಳಲ್ಲಿ ಆದಂತಹ ಅನ್ಯಾಯಗಳನ್ನು ಸರಿಪಡಿಸುವುದಕ್ಕೆ ನೀವು ಜಿಲ್ಲಾ ಮಟ್ಟದಲ್ಲಾಗಲಿ, ಡಿವಿಜನ್ ಮಟ್ಟದಲ್ಲಾಗಲೀ ಅಥವಾ ರಾಜ್ಯ ಮಟ್ಟದಲ್ಲಾಗಲೀ ಎಷ್ಟು ದಿನಗಳಲ್ಲಿ ಟ್ರಿಬ್ಯುನಲ್‌ಗಳನ್ನು ಮಾಡುತ್ತೀರಿ ? ಆ ಬಗ್ಗೆ ನೀವೇ ಹೋಲ್ ಅಂಡ್ ಸೋಲ್ ಅಥಾರಿಟಿಯನ್ನು ತೆಗೆದುಕೊಂಡು ಮಾಡಿ, ಮತ್ತು ಹೇಗೆ ಮಾಡುತ್ತೀರಿ, ಎಷ್ಟು ದಿನಗಳಲ್ಲಿ ಮಾಡುತ್ತೀರಿ ಹಾಗೂ ಯಾವ ಸ್ವರೂಪದಲ್ಲಿ ಮಾಡುತ್ತೀರೆಂಬುದನ್ನು ಹೇಳಿ ಈಗಾಗಲೇ ಹಲವಾರು ಟೆನೆಂಟ್‌ಗಳಿಗೆ ಅನ್ಯಾಯವಾಗಿ ಹೈಕೋರ್ಟ್ ಮುಂದೆ ನಿಂತಿದ್ದಾರೆ. ನನ್ನ ತಾಲ್ಲೂಕಿನಲ್ಲಿ 40-45 ವರ್ಷಗಳಿಂದ ಗೇಣಿದಾರರಾಗಿದ್ದುಕೊಂಡು ಲೆವಿ, ಪ್ರತಿಯೊಂದನ್ನು ಕಟ್ಟಿರುವುದಕ್ಕೆ ರೆಕಾರ್ಡ್ ಇದೆ. ಅಂಥವರು ಸಹ ಇಂದು ಕೋರ್ಟ್ ಮುಂದೆ ನಿಂತಿರುವ ನಿದರ್ಶನಗಳು ಸಾಕಷ್ಟಿವೆ. ಅಂಥ ವಾಜ್ಯಗಳನ್ನು ತಾವೇ ಕೋರ್ಟ್ ಮುಂದೆ ತೆಗೆದುಕೊಂಡು ಹೋಗಬೇಕೆಂದು ವಾದ ಮಾಡುವುದಿಲ್ಲ. But, there must be some forum to see such things are reviewed and proper justice is given.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜ್ಯಾಂಗ ಶಾಸನದ 42ನೇ ತಿದ್ದುಪಡಿಯನ್ನು ತಿದ್ದುಪಡಿ ಮಾಡಲಕ್ಕೆ ಆಲೋಚನೆ ಮಾಡಿದ್ದಾರೆ. ಅದರ ಬಗ್ಗೆ ತೀವ್ರ ಆಲೋಚನೆಯಲ್ಲಿದ್ದು ಅದನ್ನು ಆಗಬೇಕಾದರೆ ಸ್ವಲ್ಪ ಕಾಲ ಬೇಕಾಗುತ್ತದೆ. ಅದಕ್ಕೆ ಸ್ಪಷ್ಟವಾದ ರೂಪ ಕೊಡದೇಹೋದರೆ,

ಮೊದಲನೇ ಕಾನೂನಿನಲ್ಲಿ ಏನಿತ್ತು, ಅದನ್ನೇ ಉಳಿಸಿಕೊಳ್ಳಬೇಕಾಗುತ್ತದೆ ಆ ತಿದ್ದುಪಡಿ ಏನಾಗುತ್ತದೆಯೋ ನೋಡೋಣ. ಇದನ್ನು ಬಹಳ ಬೇಗ ಮಾಡುವ ಯೋಚನೆ ಸರ್ಕಾರದಲ್ಲಿದೆ. ಅದರ ರೂಪರೇಖೆ ಯಾವರೀತಿ ಇರಬೇಕು ಯಾವ ಮಟ್ಟದಲ್ಲಿರಬೇಕು ಎನ್ನುವ ಬಗ್ಗೆ ಯೋಚನೆ ನಡೆಯುತ್ತಿದೆ. ಅಧ್ಯಕ್ಷರೇ ನನ್ನ ಉತ್ತರ ಇಷ್ಟೇ ದಯವಿಟ್ಟು ಈ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

MADAM SPEAKER.—The question is :—

"That the Karnataka Land Reforms (Amendment) Bill, 1 77 be taken into consideration."

The motion was adopted

CLAUSE-2

MADAM SPEAKER.—The question is :

"That Clause 2 do stand part of the Bill."

The motion was adopted

Clause 2 was added to the Bill.

CLAUSE-3.

SRI KAGODU THIMMAPPA.—I beg to move the following amendment to Clause 3 :—

"That the sub-clause (1) of Clause 3 shall be substituted as follows :—

(i) The amount of premium in respect of a tenant or sub-tenant certified to be registered as occupant under Section 45 shall be payable to the State Government by the tenant, either in lump sum or in instalment over a period not exceeding twenty years with four and a half per cent interest.

Provided that the premium payable by the tenant or sub-tenant to the State Government shall not exceed more than the rent payable to such land for which he is entitled to be registered under Section 45.

(ii) Notwithstanding anything contained under sub-clause (i) no premium shall be payable to the State Government by the tenant if the land held by or in possession of such tenant or sub tenant including the land for which he is registered as occupant under Section 45 is less than two units.

(iii) Nothing prevents the tenant or sub-tenant to mortgage the lands for which he is registered as occupant under Section 45 in favour of Housing Board or Co-operative Housing Corporation or Society as collateral security to raise loan for construction or improvement of his dwelling house."

MADAM SPEAKER.—Amendment moved :—

"That the sub-clause (1) of clause 3 shall be substituted as follows :—

(i) The amount of premium in respect of a tenant or sub-tenant certified to be registred as occupant under Section 45 shall be payable to the State Government by the tenant, either in lumpsum or in instalment over a period not exceeding twenty years with four and a half per cent interest;

Provided that the premium payable by the tenant or sub-tenant to the State Government shall not exceed more than the rent payable to such land for which he is entitled to be registered under Section 45.

(ii) Notwithstanding anything contained under sub-clause (i) no premium shall be payable to the State Government by the tenant if the land held by or in possession of such tenant or sub tenant including the land for which he is registered as occupant under Section 45 is less than two units.

(iii) Nothing prevents the tenant or sub tenant to mortgage the lands for which he is registered as occupant under Section 45 in favour of Housing Board or Co-operative Housing Corporation or Society as collateral security to raise loan for construction or improvement of his dwelling house."

† ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ನಾನು ತಿದ್ದುಪಡಿ ತಂದಿರತಕ್ಕ ಉದ್ದೇಶದ ಬಗ್ಗೆ ಕ್ಲಾಸ್ (1) ರ ಬಗ್ಗೆ ಮಾತನಾಡತಕ್ಕ ಸಂದರ್ಭದಲ್ಲಿ ಹೇಳಿದಂತೆ ಒಂದೇ ಕಂತಿನಲ್ಲಿ ಅಥವಾ ನಾಲ್ಕು ವರ್ಷಗಳ ಪರ್ಸೆಂಟ್ ಬಡ್ಡಿ ಮೇಲೆ ಹಣವನ್ನು ಕೊಡತಕ್ಕದ್ದು. ಜೊತೆಗೆ ಕೆಲವೊಂದು ವರ್ಗದ ಗೇಣಿ ರೈತರಿಗೆ ಜಮೀನು ಮುಫತ್ತಾಗಿ ಕೊಡಬೇಕಾದ ಸಂದರ್ಭದಲ್ಲಿರುವುದರಿಂದ ಕ್ಲಾಸ್ (2) ನ್ನು ತಿದ್ದುಪಡಿಮಾಡಲಿಕ್ಕೆ ಸೂಚಿಸಿದ್ದೇನೆ. ಕಾರಣ ಏನು ಎಂದರೆ, ಗೇಣಿದಾರನ್ ಒಟ್ಟಿನ ಹಿಡುವಳಿ ಲೆಕ್ಕಚಾರ ಹಾಕಿದರೆ ಅರ್ಧ ಭಾಗ ಜನ 2 ಯೂನಿಟ್‌ಗಿಂತ ಕಡಿಮೆ ಜಮೀನು ಹೊಂದಿದ್ದಾರೆ. ಗೇಣಿ ರೈತರಿಗೆ ಜಮೀನು ಕಡಿಮೆ ಬರುವುದರಿಂದ ಮುಫತ್ತಾಗಿ ಜಮೀನನ್ನು ಖಾತೆ ಹಾಕಬೇಕೆಂದು ಹೇಳಿದ್ದೇನೆ. ತೀರಾ ಬಡವರು ಹಣವನ್ನು ಕೊಟ್ಟು ಉಳಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ಉದ್ಯೋಗ ಕೊಡಬೇಕಾದರೆ ಸರ್ಕಾರ ಬಂಡವಾಳವನ್ನು ಬ್ಯಾಂಕಿನಿಂದ ಕೊಡುತ್ತದೆ ಆದ್ದೇರಿಂದ ಗೇಣಿ ರೈತನಿಗೆ ಭೂಮಿಯೇ ಬಂಡವಾಳ, ಇದರಿಂದ ಅವನು ಸ್ವತಂತ್ರವಾಗಿ ಬದುಕುವುದಕ್ಕೆ ಅವಕಾಶವಾಗುತ್ತದೆ. ಮೂರ ನೆಯದಾಗಿ ಗೇಣಿರೈತರಿಗೆ ಅನೇಕ ಕಡೆಗಳಲ್ಲಿ ಗೇಣಿ ಭೂಮಿ ಬಿಟ್ಟರೆ ಅವರಿಗೆ ಬೇರೆ ಜಮೀನು ಇಲ್ಲ. ಭೂಸುಧಾರಣೆ ಕಾನೂನಿನ ಪ್ರಕಾರ ಅವನು ತನ್ನ ಇತರೇ ವ್ಯವಸಾಯೇತರ ಉದ್ದೇಶಕ್ಕಾಗಿ ತಾನು ಪಡೆದ ಜಮೀನನ್ನು ಮಾರ್ಟಗೇಜ್ ಮಾಡ

ವುದಕ್ಕೆ ಅವಕಾಶವಿಲ್ಲ. ನಮ್ಮಲ್ಲಿ ಹೌಸಿಂಗ್ ಕಾರ್ಪೊರೇಷನ್ ಹೌಸಿಂಗ್ ಸೊಸೈಟಿ, ಹಾಗೂ ಹೌಸಿಂಗ್ ಬೋರ್ಡು ಮೂಲಕ ಸಾಲ ಪಡೆದು ಮನೆ ಕಟ್ಟಬೇಕಾದರೆ; ಅವರು ಕ್ವಾರಾಟರಲ್ ಸೆಕ್ಯೂರಿಟಿ ಕೇಳುತ್ತಾರೆ. ರೂರಲ್ ಹೌಸ್ ಬಿಲ್ಡಿಂಗ್ ಕೋ ಆಪರೇಟೀವ್ ಸೊಸೈಟಿಗಳಲ್ಲಿ ಸಾಲ ತೆಗೆದು ಕೊಳ್ಳಬೇಕಾದರೆ; ಕ್ವಾರಾಟರಲ್ ಸೆಕ್ಯೂರಿಟಿ ಕೊಡಬೇಕಾದರೆ; ಗೇಣಿದಾರ ಭೂಮಿಯನ್ನು ಕೊಡುವುದಕ್ಕೆ ಬರುವುದಿಲ್ಲ. ಅದಕ್ಕೋಸ್ಕರ ಗೇಣಿ ರೈತ ಗ್ರಾಮಾಂತರ ಪ್ರದೇಶದಲ್ಲಿ ಮನೆ ಕಟ್ಟಿ ಕೊಳ್ಳಲು ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಕೆನ್ನುವುದೇ ನನ್ನ ಮೂರನೇ ತಿದ್ದುಪಡಿಯ ಉದ್ದೇಶ. ಕೋ ಆಪರೇಟೀವ್ ಮಂತ್ರಿಗಳ ಹತ್ತಿರ ಕೂಡ ಈ ವಿಚಾರ ಮಾತನಾಡಿದ್ದೇನೆ ಹೌಸಿಂಗ್ ಕಾರ್ಪೊರೇಷನ್ ಅಧ್ಯಕ್ಷರವರಾದ ಕುಮಾರಸ್ವಾಮಿಯವರನ್ನು ಕಂಡು ಮಾತನಾಡಿದ್ದೇನೆ. ಈಗಿರುವ ಭೂಸುಧಾರಣಾ ಕಾನೂನಿನ ಪ್ರಕಾರ ಸಾಲ ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದ್ದಾರೆ. ವಾಸದ ಮನೆಯ ರಿಪೇರಿ ಆಥವಾ ಕಟ್ಟಿಕೊಳ್ಳುವುದಕ್ಕೆ ಸಾಲ ಪಡೆಯುವ ಉದ್ದೇಶ ಕ್ಕಾಗಿ ಇದಕ್ಕೆ ತಿದ್ದುಪಡಿ ಆಗಬೇಕು ಇದರಿಂದ ಗ್ರಾಮಾಂತರ ಪ್ರದೇಶದ ಜನರಿಗೆ ಸಾಲ ಸಿಗುವಂತಾಗಬೇಕೆಂದು ಕೇಳಿಕೊಂಡಿದ್ದೇನೆ. ಭೂಸುಧಾರಣಾ ಕಾನೂನಿನಲ್ಲಿ ಅಡಚಣೆ ಇರುವ ಕಾರಣಕ್ಕಾಗಿ ಇವತ್ತು ಗ್ರಾಮಾಂತರ ಪ್ರದೇಶದ ಜನರಿಗೆ ಸಾಲ ಕೊಡಬೇ ಇರತಕ್ಕ ಪರಿಸ್ಥಿತಿ ಉಂಟಾಗಿದೆ ಹೌಸಿಂಗ್ ಕಾರ್ಪೊರೇಷನ್ನಿನವರು ಈ ಒಂದು ದೃಷ್ಟಿಯಿಂದ ಕಾರ್ಪೊರೇಷನ್ ಬಾಗಿಲನ್ನು ಸಂಪೂರ್ಣವಾಗಿ ಮುಚ್ಚಿದ್ದಾರೆ. ಈ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

1-30 P. M.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕರೇ, ಮಾನ್ಯಸದಸ್ಯರು ಮೊದಲನೇ ಎರಡು ತಿದ್ದುಪಡಿ ಅಂಶಗಳ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆ ಈಗಾಗಲೇ ಚರ್ಚೆಯಾಗಿ ಅದಕ್ಕೆ ಉತ್ತರ ಕೊಟ್ಟಿದ್ದೇನೆ. ಮೊದಲನೆಯ ಅಂಶ ಎಂದರೆ ಅವನಿಂದ ಭೂಮಿ ಪರಭಾರೆ ಯಾಗಬಾರದು, ಅವನು ಅವನ್ನು ಉಳಿಸಿಕೊಳ್ಳಬೇಕು ಎಂದು ಸರ್ಕಾರದ ಉದ್ದೇಶ, ಅದು ಕಾನೂನು ಪ್ರಕಾರ ಇದೆ, ಯಾವುದೋ ಒಂದು ಮನೆ ನೆಪದಿಂದ ಪರಭಾರೆ ಮಾಡತಕ್ಕ ಸಂದರ್ಭ ಬರುತ್ತದೆ, ಆ ಸಾಲಕ್ಕೆ ಈ ಈ ಭೂಮಿಯನ್ನು ಇಟ್ಟು ಮಾಡತಕ್ಕದು ನಿಯಮವಲ್ಲ, ಆದ್ದರಿಂದ ಮಾನ್ಯಸದಸ್ಯರು ಏನು ಒಂದು ತಿದ್ದುಪಡಿ ಹೇಳುತ್ತಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಇಪ್ಪತ್ತು ಒಂದು ಎಕರೆ ಮಾತ್ರ ಜಮೀನು ಇದ್ದು ಅತನಿಗೆ ಬೇರೆ ಏನೂ ಇಲ್ಲದೇ ಇದ್ದರೆ, ಅತನು ಮನೆ ಕಟ್ಟಿಕೊಳ್ಳಬೇಕಾದ ಜನತಾ ಹೌಸಿಂಗ್ ಸ್ಕೀಮು ಪ್ರಕಾರ ಸಾಲ ಸಿಕ್ಕುವುದಿಲ್ಲ. ಅತನ ಉತ್ಪತ್ತಿ 1200 ರೂಪಾಯಿಗಳಿಗಿಂತ ಜಾಸ್ತಿ ಇದೆ ಎಂದು ಹೇಳುತ್ತಾರೆ, ಆದ್ದರಿಂದ ಅತನು ಮನೆ ಕಟ್ಟಿಕ್ಕೊವುದಕ್ಕೆ ತಾವು ಯಾವತರಹ ಸೋರ್ಸನ್ಸ್ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ — ಈಗ ಸೋರ್ಸನ್ಸ್ ಯಾವ ತರಹ ಎಂದು ಹೇಳುವುದು ಇಲ್ಲಿ ಬರುವುದಿಲ್ಲ. ಈಗ ನಮ್ಮ ಮುಂದೆ ಇರತಕ್ಕದ್ದಕ್ಕೂ, ಮಾನ್ಯಸದಸ್ಯರು ಕೆಳುತಿಸಿರತಕ್ಕ ತಿದ್ದುಪಡಿಗೂ ಸಂಬಂಧವಿಲ್ಲ ಆದ್ದರಿಂದ ಮಾನ್ಯಸದಸ್ಯರು ಏನು ಒಂದು ತಿದ್ದುಪಡಿ ಹೇಳುತ್ತಾರೆ ಅದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ ನಮ್ಮ ಮೂಲ ಉದ್ದೇಶ ಪರಭಾರೆ ಮಾಡಬಾರದು ಎಂದು ಇದೆ ಆದ್ದರಿಂದ ಮಾನ್ಯಸದಸ್ಯರು ಏನು ತಿದ್ದುಪಡಿ ಹೇಳುತ್ತಾರೆ. ಅದನ್ನು ಒಪ್ಪುವುದಕ್ಕಾಗುವುದಿಲ್ಲ ಎಂದು ಹೇಳುತ್ತೇನೆ.

MADAM SPEAKER.—The amendment is :

"That the sub clause 1 of clause 3 shall be substituted as follows :-

(i) The amount of premium in respect of a tenant or sub-tenant certified to be registered as occupant under section 45 shall be payable to the State Government by the tenant either in lumpsum

or in instalment over a peried not exceeding twenty years with four and a half per cent interest :

Provided that the premium payable by the tenant or sub-tenant to the State Government shall not exceed more than the rent payable to such land for which he is entitled to be registered under section 45.

(ii) Nothwithsanding anything contained under sub clause (i) no premium shall be payable to the State Government by the tenant if the land held by or in possession of such tenant or sub-tenant including the land for which he is registered as occupant under section 45 is less than two units.

(iii) Nothing prevents the tenant of sub-tenant mortgage the lands for which is registered as occupant under section 45 in favour of Housing Board or Co-operative Housing Corporation or Society as collotoral security to raise loan for construction or improvement of his dwelling house.

The amendment was negatived

MADAM SPEAKER.—The question is :

"That clause 3 do stand part of the Bill."

The Motion was adopted

Clause 3 was added to the Bill.

CLAUSES 4 TO 11

MADAM SPEAKER.—The question is :

"That Clauses 4 to 11, both inclusive do stand part of the Bill."

The Motion was adopted

Clauses 4 to 11, both inclusive, were added to the Bill.

CLAUSE 1 ETC,

MADAM SPEAKER.—The question is :

"That clause 1, the Long Title, the Preamble and the Enacting Formula do stand part of the Bill."

The motion was adopted

Clause 1, Preamble and Title and the Enacting Formula were added to the Bill.

Motion to Pass

SRI N. HUTCHMASTHY GOWDA.—I move.

"That the Karnataka Land Reforms (Amendment) Bill, 1977 be passed."

MADAM SPEAKER.—The question is :

"That the Karnataka Land Reforms (Amendment) Bill, 1977 be passed."

The motion was adopted and the Bill was passed.

Karnataka Village Panchayats Postponements of Elections (Amendment) Bill 1977

Motion to Consider

SRI K. PRABHAKAR.—(Minister for Rural Development and Panchayat Raj).—Madam, I beg to move-

"That the Karnataka village Panchayats (Postponements of Elections) (Amendment) Bill, 1977 be taken into consideration."

MADAM SPEAKER.—Motion moved –

"That the Karnataka Village Panchayats (Postponements of Elections) (Amendment) Bill, 1977 be taken into consideration."

ಶ್ರೀ ಕೆ. ಪ್ರಭಾಕರ್.—(ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಶಾಖೆಗಳ ಮಂತ್ರಿಗಳು)

ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಜನ ಮಾನ್ಯ ವಿರೋಧಪಕ್ಷದ ಸದಸ್ಯರು ಕೋರಿರುವ ರೀತಿಯಲ್ಲಿ ಚುನಾವಣೆಯನ್ನು ಯಾವಾಗ ನಡೆಸಬೇಕು ಎನ್ನುವುದರ ಬಗ್ಗೆ ಸಂಪೂರ್ಣವಾಗಿ ಉತ್ತರವನ್ನು ಕೊಟ್ಟಿದ್ದಾಗಿದೆ. ಅದರ ಸಾರಾಂಶ ಎಂದರೆ ಮುಂದಿನ ನವೆಂಬರ್ ತಿಂಗಳಿನಲ್ಲಿ ಪಂಚಾಯಿತಿ ಚುನಾವಣೆಯನ್ನು ನಡೆಸಲಾಗುತ್ತದೆ ಎಂದು ಈಗಾಗಲೇ ತಿಳಿಸಿದ್ದೇನೆ. ಆ ಪ್ರಕಾರ ಪ್ರಯತ್ನ ಪಟ್ಟು ಚುನಾವಣೆಯನ್ನು ನಡೆಸಲಾಗುತ್ತದೆ. ಈಗ ತಾವೆಲ್ಲರೂ ಕೋರಿರುವ ರೀತಿಯಲ್ಲಿ ಮೂರು ನಾಲ್ಕು ಅಂಶಗಳು ಇವೆ. ಒಂದನೆಯದು ಎಂದರೆ ಮತದಾರರ ಪಟ್ಟಿಯಲ್ಲಿ ಆಗಬೇಕಾದಂತ ಬದಲಾವಣೆಗಳು, ಪಂಚಾಯಿತಿ ಚುನಾವಣಾ ಕ್ಷೇತ್ರದವಾರ್ಪು, ಮತ್ತು ಅದರಲ್ಲಿ ಬರತಕ್ಕ ಬದಲಾವಣೆಗಳು ಇನ್ನು ನಿಮ್ಮ ವರ್ಗಕ್ಕೆ ಮತ್ತು ನಿಮ್ಮ ಪಂಗಡಗಳಿಗೆ 1971 ಸೆನಸಸ್ ಗಣತಿ ಪ್ರಕಾರ ಎಲ್ಲೆಲ್ಲ ಜನಗಣತಿ ಜಾಸ್ತಿಯಾಗಿದೆ ಅಲ್ಲಿ ದೊರಕಬಹುದಾದ ಒಂದು ಹೆಚ್ಚಿನ ಸ್ಥಾನಗಳನ್ನು ಕೂಡಿಸಿಕೊಡತಕ್ಕ ವಿಷಯ ಇವು ಪ್ರಧಾನವಾದುದು. ಇನ್ನು ಹೊಸದಾಗಿ ಹೆಸರುಗಳನ್ನು ಸೇರಿಸುವ ಬಗ್ಗೆ ನಾವು ಮುಂತಾದ ಕಾರಣಗಳಿಂದ ಯಾರ ಹೆಸರನ್ನು ತೆಗೆಯಬೇಕು, ಈ ತಿದ್ದುಪಡಿಗೆ ಬೇಕಾದಂತ ನಮೂನೆಗಳು ಸಕಾಲಕ್ಕೆ ಹೊರಡಿಸಿದ್ದಿಲ್ಲ. ಎಂದು ವ್ಯಕ್ತಪಡಿಸಿದ್ದಾರೆ. ವದರ ಬಗ್ಗೆ ಈಗಾಗಲೇ ಚುನಾವಣಾ ಅಧಿಕಾರಿಗಳವರಿಗೆ ಒಳ್ಳೆಯ ವ್ಯವಸ್ಥೆಯ ರೀತಿಯಲ್ಲಿ ಡಾಡಬೇಕು ಎಂದು ಸರ್ಕಾರದಿಂದ ತಿಳಿಸಲಾಗಿದೆ, ಮಾನ್ಯರವರನ್ನು ಮೂರುನಾಲ್ಕು ತೊಡಕಿನ ನಂತಗಳನ್ನು ಏನು ಭಾವಿಸಿದ್ದಿರಿ, ಅವುಗಳ ಬಗ್ಗೆ ನಮಂಜಸವಾಗಿ ತಾವು ಒಪ್ಪುವ ರೀತಿಯಲ್ಲಿ ತರ್ಕಾರದಿಂದ ಚುನಾವಣಾ ಅಧಿಕಾರಿಗಳವರಿಗೆ ತಿಳಿಸಲಾಗಿದೆ. ಇದು ಒಂದು ಚಿಕ್ಕ ಚಲ್ಲು ಎಂದು ಆಮಗೆ ಗೊತ್ತಿದೆ, ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಮಾತಿಗೆ ಅವಕಾಶ ಇಲ್ಲದಂತೆ ಈ ಒಂದ